GOVERNMENT OF KARNATAKA

DEPARTMENT OF PRE UNIVERSITY EDUCATION,

SAMPIGE ROAD, 18TH CROSS, MALLESWARAM, BANGALORE-12

No: PUE/EXAM/FTT/2020-21 Dated: 16 -07-2021

# TIME TABLE FOR II PUC ANNUAL EXAMINATION – AUGUST 2021

| DATE AND DAY OF EXAMINATION | MORNING SESSION<br>10-15 AM TO 1-30 PM | SUB CODE | AFTER NOON SESSION<br>2-15 PM TO 5-30 PM | SUB CODE |
|---|---|---|---|---|
| 19.08.2021<br>THURSDAY | OPTIONAL KANNADA<br>MATHEMATICS<br>BASIC MATHS | 16<br>35<br>75 | | |
| **20.08.2021** | **MOHARAM HOLIDAY** | | | |
| 21.08.2021<br>SATURDAY | KANNADA | 01 | TAMIL<br>TELUGU<br>MALAYALAM<br>MARATHI<br>ARABIC<br>FRENCH | 04<br>05<br>06<br>07<br>11<br>12 |
| **22.08.2021** | **SUNDAY** | | | |
| 23.08.2021<br>MONDAY | GEOGRAPHY<br>PSYCHOLOGY<br>PHYSICS | 24<br>32<br>33 | | |
| 24.08.2021<br>TUESDAY | ENGLISH | 02 | | 24<br>32 |
| 25.08.2021<br>WEDNESDAY | ACCOUNTANCY<br>GEOLOGY<br>EDUCATION<br>HOME SCIENCE | 30<br>37<br>52<br>67 | IT<br>RETAIL<br>AUTOMOBILE<br>HEALTH CARE<br>BEAUTY & WELLNESS | 61<br>62<br>63<br>64<br>65 |
| 26.08.2021<br>THURSDAY | POLITICAL SCIENCE | 29 | | |
| 27.08.2021<br>FRIDAY | HISTORY<br>STATISTICS | 21<br>31 | | |
| **28.08.2021 & 29.08.2021** | **KCET EXAM** | | | |
| 30.08.2021<br>MONDAY | ECONOMICS | 22 | | |
| 31.08.2021<br>TUESDAY | URDU<br>SANSKRIT | 08<br>09 | | |
| 01.09.2021<br>WEDNESDAY | KARNATAKA MUSIC<br>HINDUSTANI MUSIC<br>SOCIOLOGY<br>BIOLOGY<br>ELECTRONICS<br>COMPUTER SCIENCE | 25<br>26<br>28<br>36<br>40<br>41 | | |
| 02.09.2021<br>THURSDAY | LOGIC<br>BUSINESS STUDIES<br>CHEMISTRY | 23<br>27<br>34 | | |
| 03.09.2021<br>FRIDAY | HINDI | 03 | | |

Snehal

SNEHAL.R I.A.S.,
DIRECTOR,
DEPT. OF PRE-UNIVERSITY EDUCATION

Scanned with CamScanner

ಕರ್ನಾಟಕ ಸರ್ಕಾರ

Government of Karnataka

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.

Office of the Director,
Department of Pre University Education,
18th Cross,Sampige Road, Malleshwaram,
Bengaluru-560012.

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೊ&ಫ/01/2021.

ದಿನಾಂಕ: 20.07.2021

## ಸು ತ್ತೋ ಲೆ

ವಿಷಯ: 2020-21ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಣೆ ಹಾಗೂ ಆಗಸ್ಟ್ 2021ರಲ್ಲಿ ನಡೆಯುವ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಳ್ಳುವ ಬಗ್ಗೆ.

* * * * *

1. 2020-21ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶವನ್ನು ದಿನಾಂಕ:20.07.2021ರ ಸಂಜೆ 4:00 ಗಂಟೆಗೆ http://karresults.nic.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.
2. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಫಲಿತಾಂಶವನ್ನು ಸರ್ಕಾರದ ಆದೇಶ ಸಂಖ್ಯೆ:ಇಪಿ 19 ಟಿಪಿಯು 2021 ಬೆಂಗಳೂರು, ದಿನಾಂಕ:05.07.2021ರ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ.
3. ದಿನಾಂಕ:20.07.2021 ರಂದು ಸಂಜೆ 5.00 ಗಂಟೆಗೆ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿ.ಯು.ಸಿ ಫಲಿತಾಂಶವನ್ನು ಪ್ರಕಟಿಸಲಾಗುವುದು.
4. 2020-21ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಪ್ರಕಟಿತ ಫಲಿತಾಂಶದಲ್ಲಿ ಏನಾದರೂ ವ್ಯತ್ಯಾಸಗಳು ಇದ್ದಲ್ಲಿ ದಿನಾಂಕ:26.07.2021 ರೊಳಗಾಗಿ ಪೂರಕ ದಾಖಲೆಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಪ್ರಾಂಶುಪಾಲರೇ ಖುದ್ದಾಗಿ ಸಲ್ಲಿಸುವುದು. ಜಿಲ್ಲಾ ಉಪನಿರ್ದೇಶಕರುಗಳು ದಾಖಲೆಗಳನ್ನು ಕ್ರೋಢೀಕರಿಸಿ ಕೇಂದ್ರ ಕಛೇರಿಗೆ 28.07.2021ರ ಒಳಗಾಗಿ ತಲುಪಿಸುವುದು. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು/ಪೋಷಕರನ್ನು ಫಲಿತಾಂಶಕ್ಕೆ ಸಂಬಂಧಿಸಿದಂತೆ ಕೇಂದ್ರ ಕಛೇರಿಗೆ ಕಳುಹಿಸಬಾರದು. ಕಳುಹಿಸಿದಲ್ಲಿ ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
5. 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ಘೋಷಿತ ಫಲಿತಾಂಶದಲ್ಲಿ ಪಡೆದ ಅಂಕಗಳು ವಿದ್ಯಾರ್ಥಿಗಳಿಗೆ ತೃಪ್ತಿಕರವಾಗದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳಿಗೆ ಆಗಸ್ಟ್ 2021ರಲ್ಲಿ ನಡೆಸುವ ಪರೀಕ್ಷೆಗೆ ಹಾಜರಾಗಲು ಅವಕಾಶ ಕಲ್ಪಿಸಲಾಗಿದೆ. ಈ ವಿದ್ಯಾರ್ಥಿಗಳು ಮಾತ್ರ ನಿಯಮಾನುಸಾರ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳ ಮೂಲಕ ಅರ್ಜಿಗಳನ್ನು ಸಲ್ಲಿಸುವುದು ಹಾಗೂ ಸಂಬಂಧಪಟ್ಟ ಪ್ರಾಂಶುಪಾಲರು ದಿನಾಂಕ:30.07.2021ರ ಒಳಗೆ ಇಲಾಖಾ SATS Portal ನಲ್ಲಿ Update ಮಾಡುವುದು.
6. 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದ ಖಾಸಗಿ ಅಭ್ಯರ್ಥಿಗಳಿಗೆ ದಿನಾಂಕ:19.08.2021 ರಿಂದ 03.09.2021ರ ವರೆಗೆ ಪರೀಕ್ಷೆಯನ್ನು ನಡೆಸಲು ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.
7. 2020-21ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿಗೆ ನಿಗದಿಪಡಿಸಿರುವ ಶೇ 70 ರಷ್ಟರ ಪಠ್ಯಕ್ರಮಕ್ಕೆ ಈ ಹಿಂದಿನ ಪದ್ಧತಿಯಂತೆ ಪರೀಕ್ಷೆಯನ್ನು ನಡೆಸಲಾಗುವುದು. ಪ್ರಶ್ನೆಪತ್ರಿಕೆಗಳ ಮಾದರಿಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.
8. 2020-21ನೇ ಸಾಲಿನ ದ್ವಿತೀಯ ಪಿ.ಯು.ಸಿ ಘೋಷಿತ ಫಲಿತಾಂಶದಲ್ಲಿ ನೀಡಿರುವ ಅಂಕಗಳು ವಿದ್ಯಾರ್ಥಿಗಳಿಗೆ ತೃಪ್ತಿಕರವಾಗದೇ ಇದ್ದಲ್ಲಿ, ಫಲಿತಾಂಶವನ್ನು ತಿರಸ್ಕರಿಸಿ ಪರೀಕ್ಷೆಗೆ ಹಾಜರಾಗಲು ಇಚ್ಛಿಸುವ ಹೊಸ ವಿದ್ಯಾರ್ಥಿಗಳು(Freshers), ತಾವು ಇಚ್ಛಿಸುವ ವಿಷಯಗಳ ಫಲಿತಾಂಶವನ್ನು ತಿರಸ್ಕರಣೆ ಮಾಡಿ ಪರೀಕ್ಷೆಗೆ ಹಾಜರಾಗಲು ಶುಲ್ಕರಹಿತವಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು ಮಾರ್ಚ್ 2021ರ ಪರೀಕ್ಷೆಗೆ ತೆಗೆದುಕೊಂಡಿದ್ದ ವಿಷಯಗಳ ಫಲಿತಾಂಶವನ್ನು ಮಾತ್ರ ತಿರಸ್ಕರಿಸಲು ಶುಲ್ಕರಹಿತವಾಗಿ ಅವಕಾಶ ನೀಡಿದೆ. ಫಲಿತಾಂಶ ಪ್ರಕಟಗೊಂಡಿರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಬೇರೆ ಯಾವುದೇ



Scanned with CamScanner

ವಿದ್ಯಾರ್ಥಿಗಳಿಗೆ ಹೊಸದಾಗಿ ಪರೀಕ್ಷೆಗೆ ನೋಂದಾಯಿಸಿಕೊಳ್ಳಲು ಅವಕಾಶ ಇರುವುದಿಲ್ಲ. ಪ್ರಾಂಶುಪಾಲರು ಈ ಬಗ್ಗೆ ಸೂಕ್ತ ಗಮನಹರಿಸಲು ಸೂಚಿಸಿದೆ.

| | |
|---|---|
| ಫಲಿತಾಂಶ ತಿರಸ್ಕರಿಸಿದ ವಿದ್ಯಾರ್ಥಿಗಳ ಮಾಹಿತಿಯನ್ನು ಪ್ರಾಂಶುಪಾಲರು SATS Portal ನಲ್ಲಿ Update ಮಾಡಲು ಕೊನೆಯ ದಿನಾಂಕ | **30.07.2021** |
| ಪ್ರಾಂಶುಪಾಲರು ಪರೀಕ್ಷಾ ಭೌತಿಕ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ಕೊನೆಯ ದಿನಾಂಕ | **31.07.2021** |
| ಕ್ರೋಢೀಕೃತ ಪರೀಕ್ಷಾ ಭೌತಿಕ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಯಿಂದ ಕೇಂದ್ರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕಾದ ಕೊನೆಯ ದಿನಾಂಕ | **02.08.2021** |

9. ಜಿಲ್ಲಾ ಉಪನಿರ್ದೇಶಕರು ಪ್ರಾಂಶುಪಾಲರಿಂದ ಸ್ವೀಕರಿಸಿದ ಪರೀಕ್ಷಾ ಅರ್ಜಿಗಳನ್ನು SATS Portal ನಲ್ಲಿ Update ಮಾಡಿರುವುದನ್ನು ಖಾತ್ರಿಪಡಿಸಿಕೊಂಡು, ಪ್ರಾಂಶುಪಾಲರಿಂದ Update ಮಾಡಿರುವುದಕ್ಕೆ ಮುಚ್ಚಳಿಕೆ ಪತ್ರ ಪಡೆದ ನಂತರ ಕಾಲೇಜುವಾರು ಕ್ರೋಢೀಕೃತ ವಿದ್ಯಾರ್ಥಿಗಳ ಪಟ್ಟಿ ಹಾಗೂ ಮುಚ್ಚಳಿಕೆ ಪತ್ರವನ್ನು ಖುದ್ದಾಗಿ ದಿನಾಂಕ:02.08.2021ರ ಒಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

Snehal

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ಸಹಾಯಕ ನಿರ್ದೇಶಕರು, ಗಣಕ ಶಾಖೆ.
4. ಸಹಾಯಕ ನಿರ್ದೇಶಕರು, ಇಲಾಖಾ ಇ–ಆಡಳಿತ ಶಾಖೆ.
5. ಹೆಚ್ಚುವರಿ ಪ್ರತಿ.

Scanned with CamScanner